| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಓ. ಎಸ್. ನಂ. 97/2022 | | | |
| ಸಾಕ್ಷಿದಾರರ ಹೆಸರು | ಅನಿಲ್ ಕುಮಾರ್ | | |
| ತಂದೆಃ ಹೆಸರು | ನಾರಾಯಣಸ್ವಾಮಿ | ಪಿ ಡಬ್ಲ್ಯೂಃ | 1 |
| ವಯಸ್ಸು | 23 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಗೋಪಸಂದ್ರ | ಭೋದಿಸಿದ ದಿನಾಂಕ | 02-04-2024 |

ಮುಖ್ಯ ವಿಚಾರಣೆಃ ಶ್ರೀ ಟಿ ಎನ್ ಎಸ್ ಪರ ಶ್ರೀ ಜೆ ಇ ಕೆ ವಕೀಲರಿಂದಃ

ನಾನು 5 ನೇ ವಾದಿಯ ಕಾನೂನುಬದ್ಧ ವಾರಸುದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಮಾಡಿರುತ್ತೇನೆ. ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

1. ವಂಶ ವೃಕ್ಷದ ನೋಟರೀಕೃತ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

2. ದಿಃ07-08-1959 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

3. ದಿಃ19-07-1967 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

4. ಸರ್ವೆ ನಂ. 1/4, 1/6, 1/7, 1/5, 1/13 ರ ಐದು ಪಹಣಿ ಪತ್ರಿಕೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ರಿಂದ ನಿಪಿ-8 ಎಂದು ಗುರುತಿಸಲಾಯಿತು.

5. ಮುಟೇಷನ್ ರಿಜಿಸ್ಟರ್ ನ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ9 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ 6 ಮತ್ತು 8 ರ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.